REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 30 । ಸಂಚಿಕೆ : 18 । ಆಗಸ್ಟ್ 9, 2023 । ಬುಧವಾರ । ಪುಟಗಳು : 8 । ಬೆಲೆ : 2/-




## ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು

## ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿಗಳಿಗೆ ಐದು ದಿನಗಳ ತರಬೇತಿ ಶಿಬಿರ





**ಬೆಂಗಳೂರು** : ದಿನಾಂಕ : 31.07.2023ರಿಂದ ದಿನಾಂಕ : 04.08.2023ರವರೆಗೆ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ಮತ್ತು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ (ಆರ್‌ಐಸಿಎಂ)ಯ ಜಂಟಿ ಸಹಯೋಗದೊಂದಿಗೆ ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿಗಳಿಗೆ ಏರ್ಪಡಿಸಿದ್ದ ಐದು ದಿನಗಳ ತರಬೇತಿ ಶಿಬಿರವನ್ನು ಸಹಕಾರ ಸಂಘಗಳ ಅಪರ ನಿಬಂಧಕರಾದ ಶ್ರೀ ಗುರುಸ್ವಾಮಿ ರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಹಾಮಂಡಳದ ಶಿಕ್ಷಣ ನಿಧಿ ಸಲಹಾ ಸಮಿತಿಯ ಸದಸ್ಯರುಗಳಾದ ಶ್ರೀ ಚಂದ್ರಮೌಳಿ ಎಸ್., ಶ್ರೀ ಪಿ.ಎಲ್.ವೆಂಕಟರಾಮರೆಡ್ಡಿ, ಆರ್‌ಐಸಿಎಂನ ಉಪನಿರ್ದೇಶಕ ಶ್ರೀ ಕೆ. ರವಿಚಂದ್ರನ, ಮಹಾಮಂಡಳದ ಅಧಿಕಾರಿ ಶ್ರೀ ಎನ್. ರಮೇಶ್, ಆರ್‌ಐಸಿಎಂನ ಅಧಿಕಾರಿ ಶ್ರೀಮತಿ ಸೌಮ್ಯ ಮತ್ತಿತರರು ಉಪಸ್ಥಿತರಿದ್ದರು.

## ದಿನಾಂಕ : 31.07.2023 ರಿಂದ ದಿನಾಂಕ : 04.08.2023ರವರೆಗೆ ತರಬೇತಿ ಪಡೆದ ಅಧಿಕಾರಿಗಳಿಗೆ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್ ಕೇರೂರೆ ರವರು ಪ್ರಮಾಣಪತ್ರ ವಿತರಿಸಿದರು






2 ವಿತ್ತೀಯ ಕೊರತೆ ಶೇ.25.3ರಷ್ಟು
4 ದಿ ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಅಧ್ಯಕ್ಷರಾಗಿ ಮುರುಗೇಶ ಪುನರಾಯ್ಕೆ, ಉಪಾಧ್ಯಕ್ಷರಾಗಿ ಜಯಮ್ಮ
7 ನಿಮ್ಮ ಪ್ರಶ್ನೆ ನಮ್ಮ ಉತ್ತರ

## ಸಂಪಾದಕೀಯ

# ಆತ್ಮೀಯ ಸಹಕಾರಿಗಳೇ...



## ಮೃಗೀಯ ವರ್ತನೆಗೆ ಕಡಿವಾಣ ಬೀಳಲಿ, ನೈತಿಕತೆ ಬೆಳಗಲಿ

ಈ ವಾರದ ಅಂಕಣವನ್ನು ಸ್ವಲ್ಪ ನೋವಿನಿಂದ, ವೇದನೆಯಿಂದಲೇ ಬರೆಯುತ್ತಿರುವೆ. ಜಗತ್ತು ಇಂದು ಹೆಚ್ಚು ಅಧುನಿಕತೆಯತ್ತ ಅತ್ಯಂತ ವೇಗವಾಗಿ ದಾಪುಗಾಲು ಹಾಕುತ್ತಿದೆ. ನಮ್ಮ ಜೀವನದ ಎಲ್ಲಾ ಕ್ಷೇತ್ರಗಳು ಹೊಸ ತಾಂತ್ರಿಕತೆಗೆ ತೆರೆದುಕೊಳ್ಳುತ್ತದೆ. ನಮ್ಮ ದೇಶ ಚಂದ್ರನತ್ತ ನೌಕೆಯನ್ನು ಯಶಸ್ವಿಯಾಗಿ ಹಾರಿಬಿಟ್ಟಿದೆ.

ಆದರೆ, ಈ ಅಧುನಿಕತೆ ಮನುಷ್ಯನ ನಡೆ ನುಡಿಯಲ್ಲಿ ಪ್ರತಿಫಲಿಸುತ್ತಿದೆಯೇ ಎಂದು ನೋಡಿದರೆ, ನಿರಾಸೆಯಾಗುವುದು ಖಂಡಿತ. ಸುತ್ತಲಿನ ಜಗತ್ತೆಲ್ಲವೂ ಬದಲಾಗುತ್ತಿದ್ದರೂ ಅವನ ಮೃಗಿಯ ವರ್ತನೆ ಮಾತ್ರ ಬದಲಾಗದಿರುವುದನ್ನು ಕಾಣುತ್ತಿದ್ದೇವೆ.

ಇದಕ್ಕೆ ಉದಹರಣೆಯಾಗಿ ನೋಡುವುದಾದರೆ, ಇಂದೂ ನಡೆಯುತ್ತಿರುವ ಮಹಿಳೆಯರ ಮೇಲಿನ ದೌರ್ಜನ್ಯ-ಅತ್ಯಾಚಾರ, ಬೆತ್ತಲೆ ಮೆರವಣಿಗೆ ಪ್ರಕಣಗಳು ದಿನ-ನಿತ್ಯವೆಂಬತೆ ವರದಿಯಾಗುತ್ತಲೇ ಇದೆ. ಪ್ರಕೃತಿ ಸೌಂದರ್ಯದ ಸುಂದರ ತಾಣವೆಂದೇ ಕರಿಸಿಕೊಳ್ಳುವ ಉತ್ತರ-ಪೂರ್ವ ರಾಜ್ಯವಾದ ಮಣಿಪುರ ಇಂದು ಬೆಂಕಿಯ ರುದ್ರ ನರ್ತನದಲ್ಲಿ ನಲುಗಿ ಅಶಾಂತಿಯ ತಾಣವಾಗಿದೆ. ದೇಶಾದ್ಯಂತ ಈ ರೀತಿಯ ಘಟನೆಗಳು ನಡೆಯುತ್ತಿರುವಾಗ ನಾವು ಆಧುನಿಕ ಜಗತ್ತಿನ ಮನುಷ್ಯರೆಂದು ಕರೆಸಿಕೊಳ್ಳಲಾಗುತ್ತದೆಯೇ. ಇದೇ ನನ್ನಲ್ಲಿ ಅತೀವ ಸಂಕಟ ಉಂಟು ಮಾಡುತ್ತದೆ.

ಗ್ರಾಮೀಣ, ನಗರ, ಕಾರ್ಮಿಕ, ಅಧಿಕಾರಿ ಹೀಗೆ ಭೇದವಿಲ್ಲದೆ ಎಲ್ಲ ವರ್ಗದ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯಗಳು-ಅತ್ಯಾಚಾರಗಳು ನಡೆದಿವೆ. ಹಿರಿಯ ಶ್ರೇಣಿಯ ಐ.ಎ.ಎಸ್, ಐ.ಪಿಎಸ್. ಹುದ್ದೆ ನಿರ್ವಹಿಸುವ ಮಹಿಳಾ ಅಧಿಕಾರಿಗಳೂ ಈ ಕಿರುಕುಳದಿಂದ ಹೊರತಾಗಿಲ್ಲ. ಅಷ್ಟು ಮಾತ್ರವಲ್ಲ ಹೆಣ್ಣನ್ನು ದೇವತೆಯಾಗಿ ಕಾಣಬೇಕಾದ ಗುಡಿ-ಗುರು ಮಂದಿರ, ವಿದ್ಯಾಮಂದಿರಗಳಲ್ಲೂ ಹೆಣ್ಣು ಸುರಕ್ಷಿತವಾಗಿಲ್ಲ. ಇದರೊಂದಿಗೆ ಏನೂ ಅರಿಯದ ಸಣ್ಣ ಹೆಣ್ಣು ಮಕ್ಕಳ ಮೇಲೂ ಲೈಂಗಿಕ ದೌರ್ಜನ್ಯ ಕೂಡ ಹೆಚ್ಚುತ್ತಿದೆ. ಒಟ್ಟಾರೆ ಸಮಾಜದಲ್ಲಿ ನೈತಿಕತೆ ಅನ್ನುವುದು ಸಂಪೂರ್ಣ ಕುಸಿದಿರುವುದನ್ನು ನಾವು ಕಾಣುತ್ತಿದ್ದೇವೆ.

ಹೀಗೆ ಎಲ್ಲೆಡೆ ಹೆಚ್ಚುತ್ತಿರುವ ಮಹಿಳೆಯರ ಮೇಲಿನ ದೌರ್ಜನ್ಯ ಹಿನ್ನೆಲೆಯಲ್ಲಿ, ಹೆಣ್ಣು ಮಕ್ಕಳಿಗೆ ಆತ್ಮಸ್ಥೈರ್ಯ ತುಂಬಲು, ಸ್ವಯಂ ರಕ್ಷಣೆಗೆ ತರಬೇತಿ ನೀಡಲು ಒಂದು ಸಂಸ್ಥೆಯನ್ನು ಸ್ಥಾಪಿಸುವ ಅಗತ್ಯವಿದೆ. ಕೆಲ ಸಂಘ-ಸಂಸ್ಥೆಗಳು ಮಹಿಳೆಯರು ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಅಗತ್ಯ ಕೌಶಲ್ಯಗಳನ್ನು ಕಲಿಸುವ, ತರಬೇತಿ ನೀಡಲು ಮುಂದಾಗಬೇಕಿದೆ. ಮುಖ್ಯವಾಗಿ ಪೊಲೀಸ್ ಇಲಾಖೆ ಈ ವಿಷಯದಲ್ಲಿ ಮಹಿಳಾ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಬೇಕಿದೆ. ದುಡಿಯುವ ಮಹಿಳೆಯರಿಗೆ ಸ್ವಯಂ ರಕ್ಷಣಾ ತರಬೇತಿ ನೀಡಬೇಕು,

ಈ ರೀತಿ ಹೀನ ಕೃತ್ಯಗಳನ್ನು ತಡೆಗಟ್ಟುವ ಸಲುವಾಗಿಯೇ ನಗರಗಳಲ್ಲಿ ಮಾತ್ರವಲ್ಲ ಎಲ್ಲ ಜಿಲ್ಲಾ ಕೇಂದ್ರಗಳಲ್ಲೂ ರಾತ್ರಿ ವೇಳೆ ಪೊಲೀಸ್ ಗಸ್ತು ತಿರುಗಲು ವಾಹನ ವ್ಯವಸ್ಥೆ ಮಾಡಬೇಕಿದೆ. ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳು ನೈಟ್‌ಬೀಟ್ ಗಸ್ತು ತಿರುಗುವ ಮೂಲಕ ಕಾನೂನು ಸುವ್ಯವಸ್ಥೆಗೆ ಹೆಚ್ಚು ಪ್ರಾಧಾನ್ಯತೆ ನೀಡಬೇಕಿದೆ. ಇದರಿಂದ ಕಾನೂನು ಸುವ್ಯವಸ್ಥೆ ಜನರ ನಂಬಿಕೆಗಳಿಸುತ್ತದೆ ಆಗ ಮಾತ್ರ ಇಂತಹ ಹೀನ ಕೃತ್ಯಗಳಿಗೆ ಕಡಿವಾಣ ಬೀಳಬಹುದಾಗಿದೆ. ಮುಂದಿನ ದಿನಗಳಾದರೂ ಶಾಂತಿ ಸಮಾನತೆ ಭೋಧಿಸಿದ ಬುದ್ಧನ, ಬಸವಣ್ಣನ, ಅಕ್ಕನ ನಾಡಾಗಿ ಉಳಿಯಲಿ ಎಂದು ನಾನು ಭಾವಿಸುತ್ತೇನೆ.

▸▸ ಎಚ್.ಕೆ. ಪಾಟೀಲ್

## ವಿತ್ತೀಯ ಕೊರತೆ ಶೇ.25.3ರಷ್ಟು

**ನವದೆಹಲಿ :** ಕೇಂದ್ರ ಸರ್ಕಾರದ ವಿತ್ತೀಯ ಕೊರತೆಯು ಜೂನ್ ತ್ರೈಮಾಸಿಕದ ಅಂತ್ಯಕ್ಕೆ ಇಡೀ ವರ್ಷದ ಗುರಿಯು ಶೇ.25.3ರಷ್ಟು ಆಗಿದೆ. ಕೇಂದ್ರ ಸರ್ಕಾರವು ಈ ಕುರಿತ ಮಾಹಿತಿಯನ್ನು ಸೋಮವಾರ ಬಿಡುಗಡೆ ಮಾಡಿದೆ. ಸರ್ಕಾರದ ವರಮಾನ ಹಾಗೂ ವೆಚ್ಚದ ನಡುವಿನ ಅಂತರವಾಗಿರುವ ವಿತ್ತೀಯ ಕೊರತೆಯು ಜೂನ್ ತ್ರೈಮಾಸಿಕದ ಅಂತ್ಯಕ್ಕೆ ರೂ.4.51ಲಕ್ಷ ಕೋಟಿ ಆಗಿದೆ. ಹಿಂದಿನ ವರ್ಷದ ಜೂನ್ ತ್ರೈಮಾಸಿಕದ ಕೊನೆಯಲ್ಲಿ ವಿತ್ತೀಯ ಕೊರತೆಯು ಇಡೀ ವರ್ಷದ ಗುರಿಯು ಶೇ.21.2ರಷ್ಟು ಆಗಿತ್ತು.

2023-24ನೆಯ ಆರ್ಥಿಕ ವರ್ಷದಲ್ಲಿ ವಿತ್ತೀಯ ಕೊರತೆಯನ್ನು ಒಟ್ಟು ಜಿಡಿಪಿಯ ಶೇ.5.9ಕ್ಕೆ ತಗ್ಗಿಸುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ.

## 2031ಕ್ಕೆ ಜಿಡಿಪಿ ದುಪ್ಪಟ್ಟು

**ನವದೆಹಲಿ :** ಭಾರತದ ಅರ್ಥವ್ಯವಸ್ಥೆಯ ವಾರ್ಷಿಕ ಬೆಳವಣಿಗೆ ಪ್ರಮಾಣವು ಶೇ.6.7ರಷ್ಟು ಇದ್ದರೆ, ಜಿಡಿಪಿ ಗಾತ್ರವು 2031ರ ವೇಳೆಗೆ ಈಗಿನ ಮಟ್ಟಕ್ಕಿಂತ ಎರಡು ಪಟ್ಟು ಹೆಚ್ಚಾಗಬಲ್ಲದು ಎಂದು ಎಸ್‌ಆ್ಯಂಡ್‌ಪಿ ಗ್ಲೋಬಲ್ ಸಂಸ್ಥೆಯ ವರದಿಯೊಂದು ಹೇಳಿದೆ.




ದೇಶದ ಜಿಡಿಪಿ ಈಗ 3.4 ಟ್ರಿಲಿಯನ್ ಡಾಲರ್ (ಅಂದಾಜು ರೂ. 281 ಲಕ್ಷ ಕೋಟಿ). ವಾರ್ಷಿಕ ಆರ್ಥಿಕ ಬೆಳವಣಿಗೆ ದರವು ಶೇ.6.7ರಷ್ಟು ಇದ್ದಲ್ಲಿ, 2031ರ ವೇಳೆಗೆ ದೇಶದ ಜಿಡಿಪಿ ಗಾತ್ರವು 6.7ಟ್ರಿಲಿಯನ್ ಡಾಲರ್ (554ಲಕ್ಷ ಕೋಟಿ) ಆಗಲಿದೆ ಎಂದು ವರದಿಯು ಅಂದಾಜು ಮಾಡಿದೆ.

2022-23ನೇ ಸಾಲಿನಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರವು ಶೇ.7.2ರಷ್ಟು ಆಗಿದೆ. ಜಾಗತಿಕ ಆರ್ಥಿಕ ಬೆಳವಣಿಗೆ ಕುಸಿಯುವುದು ಹಾಗೂ ರೆಪೊ ದರ ಹೆಚ್ಚಳದ ಪರಿಣಾಮದಿಂದಾಗಿ ದೇಶದ ಜಿಡಿಪಿ ಬೆಳವಣಿಗೆಯು ಈ ವರ್ಷ ಶೇ.6ಕ್ಕೆ ಇಳಿಕೆ ಕಾಣುವ ಸಾಧ್ಯತೆ ಇದೆ ಎಂದು ವರದಿಯಲ್ಲಿ ಹೇಳಲಾಗಿದೆ.

# ಜುಲೈ 31 ರವರೆಗೆ 6.77 ಕೋಟಿ ಐಟಿಆರ್ ಸಲ್ಲಿಕೆ; ಮೊದಲ ಬಾರಿ ಸಲ್ಲಿಸಿದವರ ಸಂಖ್ಯೆ 53.67 ಲಕ್ಷ

**ನವದೆಹಲಿ :** ದಂಡ ರಹಿತ ಆದಾಯ ತೆರಿಗೆ ಸಲ್ಲಿಕೆ ಪ್ರಕ್ರಿಯೆ ಜುಲೈ 31ಕ್ಕೆ ಕೊನೆಯಾಗಿದ್ದು, ಈ ವರೆಗೂ 6.77 ಕೋಟಿ ಐಟಿಆರ್ ಸಲ್ಲಿಕೆಯಾಗಿದ್ದು, ಈ ಪೈಕಿ 53.67 ಲಕ್ಷ ಐಟಿಆರ್ ಸಲ್ಲಿಕೆಗಳು ಮೊದಲ ಬಾರಿ ಸಲ್ಲಿಸಿದವರಾಗಿದ್ದಾರೆ ಎಂದು ಆದಾಯ ತೆರಿಗೆ ಇಲಾಖೆ ಮಾಹಿತಿ ನೀಡಿದೆ.

ತೆರಿಗೆ ಇಲಾಖೆ ಮಾಹಿತಿ ಪ್ರಕಾರ, 2023-24ರ ಮೌಲ್ಯಮಾಪನ ವರ್ಷಕ್ಕೆ (ಎವೈ) 6.77 ಕೋಟಿಗೂ ಹೆಚ್ಚು ಆದಾಯ ತೆರಿಗೆ ರಿಟರ್ನ್ಸ್ (ಐಟಿಆರ್) ಗಳನ್ನು ಜುಲೈ 31, 2023 ರವರೆಗೆ ಸಲ್ಲಿಸಲಾಗಿದೆ.

31 ಜುಲೈ 2023 ರವರೆಗೆ 53.67 ಲಕ್ಷ ಐಟಿಆರ್‌ಗಳನ್ನು ಮೊದಲ ಬಾರಿಗೆ ಸಲ್ಲಿಸಿದ್ದಾರೆ, ಇದು ತೆರಿಗೆ ಮೂಲವನ್ನು ವಿಸ್ತರಿಸುವ ನ್ಯಾಯೋಚಿತ ಸೂಚನೆಯಾಗಿದೆ ಎಂದು ತೆರಿಗೆ ಇಲಾಖೆ ಹೇಳಿದೆ.

ಮೌಲ್ಯಮಾಪನ ವರ್ಷ AY2023-24 ಗಾಗಿ ಸಲ್ಲಿಸಿದ 6.77 ಕೋಟಿ ITR ಗಳಲ್ಲಿ ಶೇ.49.18 ITRಗಳು ITR-1 (3.33 ಕೋಟಿ) ಆಗಿದ್ದು, ಶೇ.11.97ರಷ್ಟು ಅಂದರೆ 81.12 ಲಕ್ಷ ಸಲ್ಲಿಕೆಗಳು ITR-2 ಆಗಿವೆ. ಅಂತೆಯೇ ಶೇ.11.13 ರಷ್ಟು ಅಂದರೆ 75.40 ಲಕ್ಷ ಸಲ್ಲಿಕೆಗಳು ITR-3ಯದ್ದಾಗಿದ್ದು, ಶೇ. 26.77 ಅಂದರೆ 1.81 ಕೋಟಿ ಐಟಿಆರ್ ಸಲ್ಲಿಕೆಗಳು ITR-4ನದ್ದಾಗಿವೆ. ಕಡಿಮೆ ಪ್ರಮಾಣದಲ್ಲಿ ಅಂದರೆ ಶೇ.0.94% ಅಂದರೆ 6.40 ಲಕ್ಷ ಐಟಿಆರ್ ಸಲ್ಲಿಕೆಗಳು ITR-5 ನದ್ದಾಗಿದೆ ಎಂದು ಇಲಾಖೆ ಮಾಹಿತಿ ನೀಡಿದೆ.

ಈ ಐಟಿಆರ್‌ಗಳಲ್ಲಿ 46%ಕ್ಕಿಂತ ಹೆಚ್ಚು ಇ-ಫೈಲಿಂಗ್ ಪೋರ್ಟಲ್‌ನಲ್ಲಿ ಲಭ್ಯವಿರುವ ಆನ್‌ಲೈನ್ ಐಟಿಆರ್ ಸೌಲಭ್ಯವನ್ನು ಬಳಸಿಕೊಂಡು ಸಲ್ಲಿಸಲಾಗಿದೆ ಮತ್ತು ಬಾಕಿಯನ್ನು ಆಫ್‌ಲೈನ್ ಐಟಿಆರ್ ಉಪಯುಕ್ತತೆಗಳನ್ನು ಬಳಸಿಕೊಂಡು ಸಲ್ಲಿಸಲಾಗಿದೆ. ಗರಿಷ್ಠ ಫೈಲಿಂಗ್ ಅವಧಿಯಲ್ಲಿ ಇ-ಫೈಲಿಂಗ್ ಪೋರ್ಟಲ್




ಬೃಹತ್ ದಟ್ಟಣೆಯನ್ನು ಯಶಸ್ವಿಯಾಗಿ ನಿಭಾಯಿಸಿದ್ದು, ತೆರಿಗೆದಾರರಿಗೆ ಐಟಿಆರ್‌ಗಳನ್ನು ಸಲ್ಲಿಸಲು ತಡೆರಹಿತ ಅನುಭವವನ್ನು ನೀಡುತ್ತದೆ ಎಂದು ತೆರಿಗೆ ಇಲಾಖೆ ಹೇಳಿಕೆಯಲ್ಲಿ ತಿಳಿಸಿದೆ.

ಜುಲೈನಲ್ಲಿ, ಇ-ಫೈಲಿಂಗ್ ಪೋರ್ಟಲ್‌ನಲ್ಲಿ 32 ಕೋಟಿಗೂ ಹೆಚ್ಚು ಯಶಸ್ವಿ ಲಾಗಿನ್‌ಗಳಾಗಿದ್ದು, ಜುಲೈ 31 ರಂದು, ಯಶಸ್ವಿ ಲಾಗಿನ್‌ಗಳು 2.74 ಕೋಟಿಗಳಾಗಿವೆ. ಇ-ಫೈಲಿಂಗ್ ಪೋರ್ಟಲ್ ಪ್ರತಿ ಗಂಟೆಗೆ 4,96,559 ITR ಫೈಲಿಂಗ್ ಅನ್ನು ಜುಲೈ 31, 2023 ರಂದು ಸಂಜೆ 5 ರಿಂದ 6 ರವರೆಗೆ ಗಮನಿಸಿದೆ, ಪ್ರತಿ ಸೆಕೆಂಡಿಗೆ ITR ಫೈಲಿಂಗ್‌ನ ಗರಿಷ್ಠ ದರ 486 ಎಂದು ಆದಾಯ ತೆರಿಗೆ ಇಲಾಖೆ ಮಾಹಿತಿ ನೀಡಿದೆ.

## ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ : 2022-23ನೇ ಸಾಲಿನ ಸರ್ವಸದಸ್ಯರ ಮಹಾಸಭೆ







**ಹೊಸದುರ್ಗ :** ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕಿನ 2022-23ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯು ದಿನಾಂಕ : 27.07.2023ರ ಗುರುವಾರದಂದು ಬ್ಯಾಂಕಿನ ಅಧ್ಯಕ್ಷರಾದ ಶ್ರೀಯುತ ಹಂಜಿ ಶಿವಸ್ವಾಮಿ ರವರ ಘನ ಅಧ್ಯಕ್ಷತೆಯಲ್ಲಿ ಜರುಗಿತು. ಇದೇ ಸಂದರ್ಭದಲ್ಲಿ ಬ್ಯಾಂಕಿನ IMPS, UPI & MOBILE BANKING SERVICE ಸೇವೆಗಳನ್ನು ವಿದ್ಯುಕ್ತವಾಗಿ ಚಾಲನೆಗೊಳಿಸಿದರು. ಈ ಸಮಾರಂಭದಲ್ಲಿ ಬ್ಯಾಂಕಿನ ಉಪಾಧ್ಯಕ್ಷರು ಹಾಗೂ ಬ್ಯಾಂಕಿನ ಎಲ್ಲಾ ಆಡಳಿತ ಮಂಡಳಿ ನಿರ್ದೇಶಕರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ದಿ ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಅಧ್ಯಕ್ಷರಾಗಿ ಮುರುಗೇಶ ಪುನರಾಯ್ಕೆ, ಉಪಾಧ್ಯಕ್ಷರಾಗಿ ಜಯಮ್ಮ

## ಅತ್ಯಾಧುನಿಕ ತಂತ್ರಜ್ಞಾನದೊಂದಿಗೆ ಬ್ಯಾಂಕ್ ಪ್ರಗತಿ ಪಥದಲ್ಲಿದೆ : ಅಧ್ಯಕ್ಷ ಮುರುಗೇಶ್



ಶ್ರೀ ಎನ್.ಎ. ಮುರುಗೇಶ್
ಅಧ್ಯಕ್ಷರು



ಶ್ರೀಮತಿ ಜಯಮ್ಮ ಪರಶುರಾಮಪ್ಪ
ಉಪಾಧ್ಯಕ್ಷರು

**ದಾವಣಗೆರೆ** : ಅತ್ಯಾಧುನಿಕ ತಂತ್ರಜ್ಞಾನಗಳ ಅಳವಡಿಕೆಯೊಂದಿಗೆ ಗ್ರಾಹಕರಿಗೆ ಅತ್ಯುತ್ತಮ ಸೇವೆ ಒದಗಿಸುತ್ತಿರುವ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ 5 ಕೋಟಿ 53ಲಕ್ಷ ರೂ. ಲಾಭದೊಂದಿಗೆ ಪ್ರಗತಿ ಪಥದಲ್ಲಿ ಮುಂದುವರೆಯುತ್ತಿದೆ ಎಂದು ನೂತನ ಅಧ್ಯಕ್ಷ ಎನ್.ಎ.ಮುರುಗೇಶ ಹೇಳಿದರು. ಬ್ಯಾಂಕಿನ ಅಧ್ಯಕ್ಷ - ಉಪಾಧ್ಯಕ್ಷ ಸ್ಥಾನಗಳಿಗೆ ಅವಿರೋಧ ಆಯ್ಕೆ ನಂತರ ಮಾತನಾಡಿದ ಅವರು, 2018ರ ಸಾಲಿನಲ್ಲಿ ಸುಮಾರು 185 ಕೋಟಿ ರೂ.ನಷ್ಟು ಇದ್ದ ಠೇವಣಿ ಮೊತ್ತವು 2023ಕ್ಕೆ ಸುಮಾರು 323 ಕೋಟಿ ರೂಗೆ ಏರಿಕೆಯಾಗಿದ್ದು, ಸಾಲ ಮತ್ತು ಮುಂಗಡಗಳ ಮೊತ್ತವು ಸುಮಾರು 165ಕೋಟಿ ರೂ.ನಿಂದ 270ಕೋಟಿ ರೂ.ಗಳಿಗೆ ಏರಿಕೆಯಾಗಿದೆ. ಬ್ಯಾಂಕಿನ ಸ್ವಂತ ಬಂಡವಾಳವು 35 ಕೋಟಿ ರೂ.ಗಳಿಂದ 55ಕೋಟಿ ರೂ.ಗಳಿಗೆ ಹಾಗೂ ಭದ್ರತೆ 63ಕೋಟಿ ರೂ.ಗಳಿಂದ 89ಕೋಟಿಗೆ ಏರಿಕೆಯಾಗಿದ್ದು, ಇದು ಬ್ಯಾಂಕಿನ ಸದೃಢತೆಯನ್ನು ಸಾಕ್ಷೀಕರಿಸುತ್ತದೆ ಎಂದರಲ್ಲದೇ, ಫೋನ್ ಪೇ ಹಾಗೂ ಗೂಗಲ್ ಪೇ ವ್ಯವಸ್ಥೆಗಳನ್ನು ಸದಸ್ಯರುಗಳಿಗೆ ವಿಸ್ತರಿಸುವಲ್ಲಿ ತಮ್ಮ ಬ್ಯಾಂಕ್ ಜಿಲ್ಲೆಯಲ್ಲೇ ಸಾಧನೆ ಮಾಡಿದೆ ಎಂದ ಮುರುಗೇಶ್ ಅವರು, ಘರ್ಷಣೆ ಇಲ್ಲದೇ ಮನವೊಲಿಸಿ ಸಾಲ ವಸೂಲಾತಿಯಲ್ಲೂ ಯಶಸ್ವಿಯಾಗಿದ್ದೇವೆ ಎಂದು ಹೇಳಿದರು.

ಚುನಾವಣಾ ಅಧಿಕಾರಿಯಾಗಿ ಎಲ್.ಸತೀಶ್ ನಾಯಕ ಉಪಸ್ಥಿತಿಯಲ್ಲಿ ಅಧ್ಯಕ್ಷರಾಗಿ ಎನ್.ಎ.ಮುರುಗೇಶ್ ಹೆಸರನ್ನು ಎ.ಹೆಚ್. ಕುಬೇರಪ್ಪ ಸೂಚಿಸಿದರು. ಕಿರುವಾಡಿ ಸೋಮಶೇಖರ್ ಅನುಮೋದಿಸಿದರು. ಉಪಾಧ್ಯಕ್ಷರಾಗಿ ಶ್ರೀಮತಿ ಜಯಮ್ಮ ಪರಶುರಾಮಪ್ಪ ಹೆಸರನ್ನು ಕೆ.ಪಿ. ಅನಿತಾ ಸೂಚಿಸಿದರೆ, ಶಂಕರ್‌ರಾವ್ ಖಟಾವಕರ್ ಅನುಮೋದಿಸಿದರು. ನಿರ್ದೇಶಕರುಗಳಾಗಿ ಕಿರುವಾಡಿ ವಿ. ಸೋಮಶೇಖರ್, ಶಂಕರ್ ಖಟಾವ್‌ಕರ್, ಎಸ್.ಕೆ. ಪ್ರಭುಪ್ರಸಾದ್, ಕೆ.ಎಂ. ಜ್ಯೋತಿಪ್ರಕಾಶ್, ಬಿ. ಚಿದಾನಂದಪ್ಪ, ಪಿ.ಹೆಚ್. ವೆಂಕಪ್ಪ, ಬಿ. ನಾಗೇಂದ್ರಾಚಾರಿ, ಎ. ಕೊಟ್ರೋಶ್, ಆರ್. ವಿಶಾಲ್ ಕುಮಾರ್, ಉಮಾ ವಾಗೀಶ್, ಕೆ.ಪಿ. ಅನಿತಾ, ಅನುಪಾ ಡಾ. ವೀರೇಂದ್ರ ಸ್ವಾಮಿ ಪ್ರಮಾಣಪತ್ರ ಸ್ವೀಕರಿಸಿದರು.

## ಸಂಡೂರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕಿನ ವತಿಯಿಂದ ಹೃದಯ ಸಂಬಂಧಿ ಹಾಗೂ ಮಹಿಳಾ ಮತ್ತು ಮಕ್ಕಳ ಉಚಿತ ತಪಾಸಣಾ ಚಿಕಿತ್ಸೆಯನ್ನು ಕೈಗೊಳ್ಳಲಾಯಿತು









# ಮರ್ಚಂಟ್ಸ್ ಲಿಬರಲ್ ಕೋ-ಆಪ್. ಬ್ಯಾಂಕ್ ಗದಗ 59ನೇ ವಾರ್ಷಿಕ ಮಹಾಸಭೆ 3.69 ಕೋಟಿ ರೂ. ಲಾಭ ಗಳಿಕೆ



ಮರ್ಚಂಟ್ಸ ಲಿಬರಲ್ ಕೋ-ಆಪ್. ಬ್ಯಾಂಕ ಲಿ. ಗದಗ ಇದರ 59ನೇ ವಾರ್ಷಿಕ ಸರ್ವ ಸಾಧಾರಣ ಸಭೆ ದಿನಾಂಕ : 23.07.2023 ರಂದು ಎಸ್.ಬಿ.ಎಸ್. ಗಾರ್ಡನ್ ಮುಂಡರಗಿ ರಸ್ತೆ, ಗದಗದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮೋಹನ ಟಿ. ಕೋಟಿ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಬ್ಯಾಂಕಿನ ಸನ್ 2022-23ನೇ ಸಾಲಿಗೆ ತೆರಿಗೆ ಮುನ್ನ ಲಾಭ ರೂ.3 ಕೋಟಿ 69 ಲಕ್ಷ ಆಗಿರುತ್ತದೆ. ಹಾಗೂ ಸದಸ್ಯರಿಗೆ ಶೇ.12 ಪ್ರತಿಶತ ಡಿವ್ಹಿಡೆಂಡ ಘೋಷಿಸಿದೆ ಅಂತಾ ಈ ಸಂದರ್ಭದಲ್ಲಿ ಅಧ್ಯಕ್ಷರು ತಿಳಿಸಿದರು.

ಕಾರ್ಯಕ್ರಮದ ನಿರೂಪಣೆಯನ್ನು ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ರಾಜು ಎಲ್. ಕೋಟಿಯವರು ಮಾಡಿದರು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರಾದ ಶಿವಪ್ಪ ವ್ಹಿ.ಇಟಗಿ, ವಿಶ್ವನಾಥ ಸಿ. ರಾಮನಕೊಪ್ಪ, ಮಹಾದೇವಯ್ಯ ಸಿ. ಧನ್ನೂರಹಿರೇಮಠ, ಕುಬೇರಗೌಡ ಎಸ್. ಪರ್ವತಗೌಡ್ರ, ಸಂತೋಷ ಬಿ. ಅಬ್ಬಿಗೇರಿ, ಪಂಚಣ್ಣ ಸಿ. ಕತ್ತಿ, ಚಂದ್ರಕಾಂತ ಎಸ್. ಸಂಕಣ್ಣವರ, ಶ್ರೀಮತಿ ಶಿವವ್ವ ಕೆ. ಕುರಡಗಿ, ತೋಟೋಸಾ ಆರ್. ಭಾಂಡಗೆ, ಶಿವಾನಂದ ಎಚ್. ನಡವಲಗುಡ್ಡ, ಬೈಲಪ್ಪ ಟಿ. ಆಸಂಗಿ, ವೃತ್ತಿಪರ ನಿರ್ದೇಶಕರಾದ ಸಿ.ಎ ಬಸವರಾಜ ಎಂ ಬಳಗೇರಿ ಹಾಗೂ ಬಸವರಾಜ ಎಮ್. ಬಂದಕ್ಕನವರ ಮತ್ತು ಶಾಖಾ ವ್ಯವಸ್ಥಾಪಕರು, ಬ್ಯಾಂಕಿನ ಸಿಬ್ಬಂದಿಗಳು, ಪಿಗ್ಮಿ ಸಂಗ್ರಹಕಾರರು, ಬ್ಯಾಂಕಿನ ಶೇರುದಾರರು, ಠೇವುದಾರರು ಹಾಗೂ ಅಭಿಮಾನಿಗಳು ಉಪಸ್ಥಿತರಿದ್ದರು.

ಬ್ಯಾಂಕಿನ ನಿರ್ದೇಶಕರಾದ ಶ್ರೀ ವಿಶ್ವನಾಥ ರಾಮನಕೊಪ್ಪ ಇವರು ವಂದನಾರ್ಪಣೆ ಮಾಡಿದರು.

# ಅಮೆರಿಕನ್ ಡಾಲರ್ ಎದುರು 13 ಪೈಸೆ ಕುಸಿದ ರೂಪಾಯಿ ಮೌಲ್ಯ

**ಮುಂಬೈ :** ಅಮೆರಿಕನ್ ಡಾಲರ್ ಎದುರು ಭಾರತದ ರೂಪಾಯಿ ಮೌಲ್ಯ ಬುಧವಾರ ಮತ್ತೆ 13 ಪೈಸೆ ಕುಸಿಯುವ ಮೂಲಕ 82.01 ರೂಪಾಯಿಗೆ ತಲುಪಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ಬೆಲೆ ಹೆಚ್ಚಳ ಮತ್ತು ಆಮದುದಾರರಿಂದ ತಿಂಗಳಾಂತ್ಯದ ಡಾಲರ್ ಬೇಡಿಕೆ ಹೆಚ್ಚಾದ ಪರಿಣಾಮ ರೂಪಾಯಿ ಮೌಲ್ಯ ಅಮೆರಿಕನ್ ಡಾಲರ್ ಎದುರು 13 ಪೈಸೆ ಕುಸಿದಿದ್ದು, ಪ್ರತಿ ಡಾಲರ್‌ಗೆ 82.01 ರೂಪಾಯಿಗೆ ತಲುಪಿದೆ.

ಅಮೆರಿಕನ್ ಫೆಡರಲ್ ರಿಸರ್ವ್‌ನ ಬಡ್ಡಿದರದ ನಿರ್ಧಾರಕ್ಕೆ ಮುಂಚಿತವಾಗಿ ಹೂಡಿಕೆದಾರರು ಎಚ್ಚರಿಕೆಯಿಂದ ವಹಿವಾಟು ನಡೆಸುತ್ತಿದ್ದರೂ ಸಹ, ದೇಶಿ ಈಕ್ವಿಟಿ ಮಾರುಕಟ್ಟೆಯ ಪಾಸಿಟಿವ್ ಸೂಚನೆಗಳು ಮತ್ತು ವಿದೇಶಿ ನಿಧಿಗಳ ಒಳಹರಿವು ರೂಪಾಯಿ ಮೌಲ್ಯ ಕುಸಿತಕ್ಕೆ ಕಾರಣವಾಯಿತು ಎಂದು ಫಾರೆಕ್ಸ್ ವ್ಯಾಪಾರಿಗಳು ತಿಳಿಸಿದ್ದಾರೆ.



## ಟೆಕ್ಸ್‌ಟೈಲ್ ಕೋ-ಆಪರೇಟಿವ್ ಬ್ಯಾಂಕ್ ಲಿ., : ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಅವಿರೋಧ ಆಯ್ಕೆ



ಶ್ರೀ ಟಿ. ಭಾಸ್ಕರ್ (ಟಿ.ಟಿ)
ಅಧ್ಯಕ್ಷರು



ಶ್ರೀ ಎಣ್ಣೆಗೆರೆ ಆರ್. ವೆಂಕಟರಾಮಯ್ಯ
ಉಪಾಧ್ಯಕ್ಷರು

**ಬೆಂಗಳೂರು** : ಟೆಕ್ಸ್‌ಟೈಲ್ ಕೋ-ಆಪರೇಟಿವ್ ಬ್ಯಾಂಕಿನ 2023-24 ರಿಂದ 2027-28ನೇ ಸಾಲಿಗೆ ನೂತನ ಅಧ್ಯಕ್ಷರಾಗಿ ಶ್ರೀ ಟಿ. ಭಾಸ್ಕರ್ (ಟಿ.ಟಿ) ರವರು ಹಾಗೂ ಉಪಾಧ್ಯಕ್ಷರಾಗಿ ಶ್ರೀ ಎಣ್ಣೆಗೆರೆ ಆರ್. ವೆಂಕಟರಾಮಯ್ಯ (ವೈ.ವಿ.ರಾಜು)ರವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆಂದು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ) ಯವರು ತಿಳಿಸಿರುತ್ತಾರೆ.


## ದಿ ಬೈಲಹೊಂಗಲ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಪ್ರಧಾನ ವ್ಯವಸ್ಥಾಪಕರಾಗಿ ಸುರೇಶ ಬ. ಗೀರನವರ ಅಧಿಕಾರ ಸ್ವೀಕಾರ



**ಬೈಲಹೊಂಗಲ** : ದಿ ಬೈಲಹೊಂಗಲ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾಗಿ ಶ್ರೀ ಸುರೇಶ ಬ. ಗೀರನವರ ಅಧಿಕಾರ ವಹಿಸಿಕೊಂಡಿರುತ್ತಾರೆ.

# ಹೆಚ್ಚಿದ ಆದಾಯ ತೆರಿಗೆ ಮರುಪಾವತಿ : ತೆರಿಗೆದಾರರು ಎಚ್ಚರದಿಂದಿರುವಂತೆ ಕೇಂದ್ರ ಸೂಚನೆ

**ನವದೆಹಲಿ :** ತೆರಿಗೆದಾರರು 15,490 ರೂಪಾಯಿ ಆದಾಯ ತೆರಿಗೆ ಮರುಪಾವತಿ ಪಡೆದಿದ್ದಾರೆ ಎಂಬ ನಕಲಿ ಸಂದೇಶಗಳು ಹರಿದಾಡುತ್ತಿವೆ. ಪತ್ರಿಕಾ ಮಾಹಿತಿ ಬ್ಯೂರೋದ ಸತ್ಯ ತಪಾಸಣೆ ಘಟಕವಾದ ಪಿಐಬಿ ಫ್ಯಾಕ್ಟ್ ಚೆಕ್ ಈ ನಿಟ್ಟಿನಲ್ಲಿ ಸ್ಪಷ್ಟೀಕರಣವನ್ನು ನೀಡಿದೆ. ಆದ್ದರಿಂದ ತೆರಿಗೆದಾರರು ವಂಚನೆ ಐಟಿ ಮರುಪಾವತಿ ಹಗರಣಗಳ ಬಗ್ಗೆ ಎಚ್ಚರಿಸಿದೆ.




**ಪಿಐಬಿ ಫ್ಯಾಕ್ಟ್ ಚೆಕ್ :** ಆಗಸ್ಟ್ 2 ರಂದು ಟ್ವೀಟ್‌ನಲ್ಲಿ ವೈರಲ್ ಸಂದೇಶದ ಬಗ್ಗೆ ಎಚ್ಚರಿಸಿದೆ. ಸ್ವೀಕರಿಸುವವರನ್ನು 15,490 ರೂಪಾಯಿಗಳ ಆದಾಯ ತೆರಿಗೆ ಮರುಪಾವತಿಗೆ ಆಯ್ಕೆ ಮಾಡಲಾಗಿದೆ ಎಂದು ಹೇಳಿಕೊಂಡಿದೆ. ನೀವು 15,490 ರೂ. ತೆರಿಗೆ ಮರುಪಾವತಿಯನ್ನು ಅನುಮೋದಿಸಿದ್ದೀರಿ. ಮೊತ್ತವನ್ನು ನಿಮ್ಮ ಖಾತೆ ಸಂಖ್ಯೆ 5xxxxx6755ಗೆ ಜಮಾ ಮಾಡಲಾಗುತ್ತದೆ. ಇದು ಸರಿಯಾಗಿಲ್ಲದಿದ್ದರೆ ದಯವಿಟ್ಟು ಕೆಳಗಿನ ಲಿಂಕ್‌ಗೆ ಭೇಟಿ ನೀಡುವ ಮೂಲಕ ನಿಮ್ಮ ಬ್ಯಾಂಕ್ ಖಾತೆ ಮಾಹಿತಿಯನ್ನು ನವೀಕರಿಸಿ ಎಂದು ಸಂದೇಶ ತಿಳಿಸುತ್ತದೆ.

ಪಿಐಬಿ ಫ್ಯಾಕ್ಟ್ ಚೆಕ್ ಪ್ರಕಾರ ಈ ಸಂದೇಶ ನಕಲಿಯಾಗಿದೆ. ಆದಾಯ ತೆರಿಗೆ ಇಲಾಖೆ ಈ ಸಂದೇಶವನ್ನು ಕಳುಹಿಸಿಲ್ಲ. ಇಂತಹ ವಂಚನೆಗಳ ಬಗ್ಗೆ ಎಚ್ಚರದಿಂದಿರಿ ಮತ್ತು ನಿಮ್ಮ ವೈಯಕ್ತಿಕ ಮಾಹಿತಿಯನ್ನು ಹಂಚಿಕೊಳ್ಳುವುದನ್ನು ತಪ್ಪಿಸಿ ಎಂದು ಎಚ್ಚರಿಸಿದೆ.

ಆದಾಯ ತೆರಿಗೆ ರಿಟರ್ನ್‌ನ ಸರಿಯಾದ ಪ್ರಕ್ರಿಯೆಯ ನಂತರ ಮಾತ್ರ ಮರುಪಾವತಿಯನ್ನು ನೀಡಲಾಗುತ್ತದೆಯಾದ್ದರಿಂದ ಆದಾಯ ತೆರಿಗೆ ಇಲಾಖೆಯು ತೆರಿಗೆ ಮರುಪಾವತಿಗೆ ಮುಂಗಡವಾಗಿ ಲಿಂಕ್ ಅನ್ನು ಒದಗಿಸುವುದಿಲ್ಲ. ಆಗಸ್ಟ್ 2023 ರಂತೆ, ಆದಾಯ ತೆರಿಗೆ ಇಲಾಖೆಯು ತೆರಿಗೆದಾರರು ತಮ್ಮ ರಿಟರ್ನ್‌ಗಳನ್ನು ಸಲ್ಲಿಸಿದ 30 ದಿನಗಳಲ್ಲಿ ಪರಿಶೀಲಿಸುವುದನ್ನು ಕಡ್ಡಾಯಗೊಳಿಸಿದೆ. ಹಾಗೆ ಮಾಡಲು ವಿಫಲವಾದರೆ ITR ಅಮಾನ್ಯವಾಗುತ್ತದೆ. ಪರಿಣಾಮಕಾರಿಯಾಗಿ ಫೈಲಿಂಗ್ ಅನ್ನು ರದ್ದುಗೊಳಿಸುತ್ತದೆ.

ITRಗೆ ಹೆಚ್ಚಿನ ಪ್ರಕ್ರಿಯೆ ಅಗತ್ಯವಿದ್ದರೆ ಅಥವಾ ತೆರಿಗೆ ಇಲಾಖೆಗೆ ಹೆಚ್ಚುವರಿ ಮಾಹಿತಿ ಅಗತ್ಯವಿದ್ದರೆ, ಅವರು ತೆರಿಗೆದಾರರ ನೋಂದಾಯಿತ ಇಮೇಲ್ ವಿಳಾಸಗಳಿಗೆ ಸೂಚನೆಯನ್ನು ಕಳುಹಿಸುತ್ತಾರೆ.

## ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ಕರ್ನಾಟಕ ಸಹಕಾರ ಸಂಘಗಳ ನಿಯಮ 1960ರ ನಿಯಮ 29-ಬಿ-(6)ರಲ್ಲಿ ಹೇಳಿರುವಂತೆ ಸಹಕಾರ ಸಂಘಗಳು ಸತತ ಎರಡು ವರ್ಷಕ್ಕಿಂತ ಹೆಚ್ಚಾಗಿ ಒಬ್ಬರೆ ಲೆಕ್ಕ ಪರಿಶೋಧಕರನ್ನು ನೇಮಿಸುವಂತಿಲ್ಲ. ಆದರೆ, ಭಾರತೀಯ ರಿಜರ್ವ್ ಬ್ಯಾಂಕಿನ ಸುತ್ತೋಲೆಯಂತೆ ಒಬ್ಬ ಲೆಕ್ಕಪರಿಶೋಧಕ ಸತತ ಮೂರು ವರ್ಷಗಳವರೆಗೆ ಬ್ಯಾಂಕಿನ ಲೆಕ್ಕಪರಿಶೋಧನೆ ಮಾಡಬೇಕು. ಭಾರತೀಯ ರಿಜರ್ವ್ ಬ್ಯಾಂಕಿನ ಮಾರ್ಗಸೂಚಿ ಮತ್ತು ನಿಯಮಗಳಲ್ಲಿ ವ್ಯತ್ಯಾಸವಿರುವುದರಿಂದ ನಾವು ಯಾವುದನ್ನು ಪಾಲಿಸಬೇಕು?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಳಗಾವಿ.**


**ಉತ್ತರ :** ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949ಕ್ಕೆ 2020ರಲ್ಲಿ ತಿದ್ದುಪಡಿಯಾದ ನಂತರ ಕಾಯ್ದೆಯ ಬಹುತೇಕ ನಿಬಂಧನೆಗಳು ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಅನ್ವಯಿಸುತ್ತವೆ. ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯ ನಿಬಂಧನೆಗಳು ಬೇರೆ ಯಾವುದೇ ಕಾಯ್ದೆಯ ನಿಬಂಧನೆಗಳ ಮೇಲೆ ಮೇಲುಗೈ ಸಾಧಿಸುತ್ತದೆ ಎಂದು ಕಾಯ್ದೆಯಲ್ಲಿ ಸ್ಪಷ್ಟಪಡಿಸಲಾಗಿದೆ. ಆದ್ದರಿಂದ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, ನಿಯಮ ಮತ್ತು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಗಳ ನಿಬಂಧನೆಗಳಲ್ಲಿ ವಿರೋಧಾಭಾಸವಿದ್ದರೆ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯ ನಿಬಂಧನೆಗಳನ್ನು ಪಾಲಿಸಬೇಕು. ರಿಜರ್ವ್ ಬ್ಯಾಂಕು ಲೆಕ್ಕಪರಿಶೋಧಕರ ನೇಮಕಾತಿ ಸಂಬಂಧ ಸುತ್ತೋಲೆಯನ್ನು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯ, ನಿಯಮ 30(Iಎ) ಯಲ್ಲಿ ತನಗೆ ಸಿಕ್ಕಿದ ಅಧಿಕಾರವನ್ನು ಉಪಯೋಗಿಸಿ ಜಾರಿ ಮಾಡಿದೆ. ಆದ್ದರಿಂದ ಪಟ್ಟಣ ಸಹಕಾರ ಬ್ಯಾಂಕುಗಳು ರಿಜರ್ವ್ ಬ್ಯಾಂಕಿನ ಸುತ್ತೋಲೆಯಲ್ಲಿ ತಿಳಿಸಿದಂತೆ ಒಬ್ಬರೆ ಲೆಕ್ಕಪರಿಶೋಧಕರನ್ನು ಸತತ ಮೂರು ವರ್ಷಗಳವರೆಗೆ ಮರುನೇಮಕಾತಿ ಮಾಡಿ ರಿಜರ್ವ್ ಬ್ಯಾಂಕಿನ ಒಪ್ಪಿಗೆ ಪಡೆಯಬೇಕು.

## 2022-23ನೇ ಸಾಲಿಗೆ ಇಪಿಎಫ್ ಠೇವಣಿಗೆ ಶೇ.8.15 ಬಡ್ಡಿ ದರ ನಿಗದಿಪಡಿಸಲು ಕೇಂದ್ರ ಸರ್ಕಾರದ ಅನುಮೋದನೆ

**ನವದೆಹಲಿ :** 2022-23ನೇ ಸಾಲಿನ ಕಾರ್ಮಿಕರ ಭವಿಷ್ಯ ನಿಧಿ (ಇಪಿಎಫ್) ಠೇವಣಿ ಮೇಲೆ ಒದಗಿಸುವ ಬಡ್ಡಿ ದರವನ್ನು ಶೇ.8.15ಕ್ಕೆ ನಿಗದಿಪಡಿಸಲು ಸರ್ಕಾರ ಅನುಮೋದಿಸಿದೆ. ಕಾರ್ಮಿಕರ ಭವಿಷ್ಯ ನಿಧಿ ಸಂಸ್ಥೆ (ಇಪಿಎಫ್ಒ) ಮಾರ್ಚ್ 28,2023ರಂದು 2022-23ರ ಆರ್ಥಿಕ ವರ್ಷದಲ್ಲಿ ತನ್ನ ಆರು ಕೋಟಿ ಚಂದಾದಾರರಿಗೆ ಉದ್ಯೋಗಿಗಳ ಭವಿಷ್ಯ ನಿಧಿ ಠೇವಣಿಗಳ ಮೇಲಿನ ಬಡ್ಡಿ ದರವನ್ನು ಶೇ. 8.15ಕ್ಕೆ ಹೆಚ್ಚಿಸಿತ್ತು.

ಹೊರಡಿಸಿದ ಸರ್ಕಾರದ ಅಧಿಕೃತ ಆದೇಶದ ಪ್ರಕಾರ, 2022-23ರ ಇಪಿಎಫ್‌ನಲ್ಲಿ ಶೇಕಡಾ 8.15ರ ಬಡ್ಡಿಯನ್ನು ಸದಸ್ಯರ ಖಾತೆಗಳಿಗೆ ಜಮಾ ಮಾಡಲು ಇಪಿಎಫ್ಒ ಕಚೇರಿಗಳಿಗೆ ಹೇಳಿದೆ. ಈ ವರ್ಷದ ಮಾರ್ಚ್‌ನಲ್ಲಿ ಇಪಿಎಫ್ಒ ಟ್ರಸ್ಟಿಗಳು ಅನುಮೋದಿಸಿದ ಇಪಿಎಫ್ ಬಡ್ಡಿ ದರಕ್ಕೆ ಹಣಕಾಸು ಸಚಿವಾಲಯ ಒಪ್ಪಿಗೆ ನೀಡಿದ ನಂತರ ಈ ಆದೇಶ ಬಂದಿದೆ. ಈ ಇಪಿಎಫ್ ಒ ಕ್ಷೇತ್ರ ಕಚೇರಿಗಳು ಚಂದಾದಾರರ ಖಾತೆಗಳಿಗೆ ಜಮೆ ಪ್ರಕ್ರಿಯೆಯನ್ನು ಪ್ರಾರಂಭಿಸುತ್ತವೆ. ಮಾರ್ಚ್ 2022 ರಲ್ಲಿ ಉದ್ಯೋಗಿಗಳ ಭವಿಷ್ಯ ನಿಧಿ ಸಂಸ್ಥೆ (ಇಪಿಎಫ್ಒ) 2021-22 ರ ಇಪಿಎಫ್ ಠೇವಣಿಗಳ ಮೇಲಿನ ಬಡ್ಡಿ ದರವನ್ನು ಶೇಕಡಾ 8.5 ರಿಂದ ಶೇಕಡಾ 8.10ಕ್ಕೆ ಇಳಿಸಿತ್ತು.

## ನಕಲಿ ನೋಟು ಜಾಲ ಬೇಧಿಸಿದ ಬೆಂಗಳೂರು ಪೋಲೀಸರು; ಮೂವರ ಬಂಧನ



**ಬೆಂಗಳೂರು :** ಬೆಂಗಳೂರು ಪೊಲೀಸರು ನಕಲಿ ನೋಟು ಚಲಾವಣೆ ಮಾಡುತ್ತಿದ್ದ ಮೂವರನ್ನು ಬಂಧಿಸುವ ಮೂಲಕ ಅಂತರ ರಾಜ್ಯ ನಕಲಿ ನೋಟು ಜಾಲವನ್ನು ಭೇದಿಸಿದ್ದಾರೆ ಮತ್ತು 6.53 ಲಕ್ಷ ಮೌಲ್ಯದ 500 ರೂಪಾಯಿ ಮುಖಬೆಲೆಯ 1,307 ನಕಲಿ ನೋಟುಗಳನ್ನು ವಶಪಡಿಸಿಕೊಂಡಿದ್ದಾರೆ.

ತಮ್ಮ ವ್ಯಾಪ್ತಿಯಲ್ಲಿ ಇಬ್ಬರು ವ್ಯಕ್ತಿಗಳು ನಕಲಿ ನೋಟುಗಳನ್ನು ಚಲಾವಣೆ ಮಾಡುತ್ತಿರುವ ಬಗ್ಗೆ ರಹಸ್ಯ ಮಾಹಿತಿ ಪಡೆದ ಕಾಟನ್‌ಪೇಟೆ ಪೊಲೀಸರು, ಅವರನ್ನು ವಶಕ್ಕೆ ಪಡೆದು ತನಿಖೆ ಆರಂಭಿಸಿದ್ದಾರೆ.

ಪೊಲೀಸರ ಪ್ರಕಾರ, ಬಂಧಿತ ಆರೋಪಿಗಳ ಪೈಕಿ ಇಬ್ಬರು ಕೇರಳ ಮೂಲದವರಾಗಿದ್ದು, ಬೆಂಗಳೂರಿನ ಸಿಟಿ ರೈಲ್ವೆ ನಿಲ್ದಾಣದ ಬಳಿ ಅವರು ಮೆಜೆಸ್ಟಿಕ್‌ನ ಜನನಿಬಿಡ ಪ್ರದೇಶದಲ್ಲಿ ಸಣ್ಣ ಪ್ರಮಾಣದಲ್ಲಿ ನಕಲಿ ನೋಟುಗಳನ್ನು ಸರಬರಾಜು ಮಾಡುತ್ತಿರುವುದು ಪತ್ತೆಯಾಗಿದೆ.

ಬಂಧಿತ ಇಬ್ಬರು ಆರೋಪಿಗಳು ನೀಡಿದ ಮಾಹಿತಿ ಆಧಾರದ ಮೇಲೆ, ತಮಿಳುನಾಡು ಮೂಲದ ಮೂರನೇ ಸಹಚರನನ್ನು ಹೊಸೂರಿನಲ್ಲಿ ಬಂಧಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಚಾರಣೆಯ ಸಮಯದಲ್ಲಿ, ಹೊಸೂರಿನಿಂದ ಬಂಧಿಸಲ್ಪಟ್ಟ ಮೂರನೇ ಸಹಚರನು ಬಿಹಾರದ ಪಾಟ್ನಾ ಮೂಲದ ವ್ಯಕ್ತಿಯಿಂದ ನಕಲಿ ನೋಟುಗಳನ್ನು ಪಡೆದಿರುವುದಾಗಿ ಪೊಲೀಸರಿಗೆ ತಿಳಿಸಿದ್ದಾನೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



# ಆನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಮದ್ರಾಸ್ ಅಂತರರಾಷ್ಟ್ರೀಯ ಸರ್ಕಿಟ್‌ನಲ್ಲಿ ಆಯೋಜಿಸಲಾಗಿದ್ದ ಎಂಆರ್‌ಎಫ್ ಇಂಡಿಯನ್ ನ್ಯಾಷನಲ್ ಮೋಟರ್ ಸೈಕಲ್ ರೇಸಿಂಗ್ ಚಾಂಪಿಯನ್ ಶೀಪ್‌ನಲ್ಲಿ ಸ್ಪರ್ಧಿಸಿದ್ದ ಬೆಂಗಳೂರಿನ ಶ್ರೇಯಸ್ ಎಂಬ 13 ವರ್ಷದ ಹುಡುಗ ರೇಸ್ ಅಪಘಾತದಲ್ಲಿ ದುರಂತ ಸಾವಿಗೀಡಾಗಿದ್ದಾನೆ.
- ಒಮೈಕ್ರಾನ್‌ನಿಂದ ರೂಪಾಂತರಗೊಂಡಿರುವ ಹೊಸ ತಳಿಯನ್ನು ಇಜಿ 5.1 ಎಂದು ಕರೆಯಲಾಗುತ್ತಿದ್ದು ಅದೀಗ ಬ್ರಿಟನ್‌ಗೆ ಲಗ್ಗೆ ಇಟ್ಟಿದ್ದು, ಅತ್ಯಂತ ವೇಗವಾಗಿ ಹರಡುತ್ತಿದೆ ಮತ್ತು ಆತಂಕ ಹುಟ್ಟಿಸಿದೆ.
- ಹುಬ್ಬಳ್ಳಿಯ ಕರಿಯಪ್ಪ ಮತ್ತು ಸುನಂದಾ ಶಿರಹಟ್ಟಿ ದಂಪತಿಗಳು ಬೀದಿಗಳಲ್ಲಿ ವಾಸಿಸುವ ನಿರ್ಗತಿಕರಿಗೆ ಕ್ಷೌರ, ಸ್ನಾನ ಮಾಡಿಸುತ್ತಾರೆ ಮತ್ತು ಅವರುಗಳ ಕೂದಲು, ಉಗುರುಗಳನ್ನು ಟ್ರಿಮ್ ಮಾಡಲು ಗ್ರೂಮಿಂಗ್ ಕೂಡ ಮಾಡುತ್ತಾರೆ ಹಾಗೆಯೇ ಅವರುಗಳಿಗೆ ಆಹಾರ ನೀಡುತ್ತಾರೆ.
- ಜಪಾನ್‌ನ ಟೊಕೊ ಎಂಬ ವ್ಯಕ್ತಿ ತನ್ನಿಷ್ಟದ ಸಾಕು ನಾಯಿಯಂತೆ ಕಾಣಲು ಬರೊಬ್ಬರಿ 12 ಲಕ್ಷ ರೂ ಖರ್ಚು ಮಾಡಿ ನಾಯಿ ಕಸ್ಟ್ಯೂಮ್ ಸಿದ್ದಪಡಿಸಿಕೊಂಡಿದ್ದು ಅದನ್ನು ಧರಿಸಿ ನಾಯಿಯಂತೆ ನಡೆದಾಡುತ್ತಾನೆ.
- ವಿಜಯಪುರದ ಜಿಲ್ಲಾ ಪಂಚಾಯತ್ ಸರ್ಕಾರಿ ಪೂರ್ವ ಮೆಟ್ರಿಕ್ ಹಾಸ್ಟೆಲ್‌ಗಳ ವಿದ್ಯಾರ್ಥಿಗಳಿಗಾಗಿ ಆನ್ ಲೈನ್ ಟ್ಯೂಷನ್ ತರಗತಿಗಳನ್ನು ನೀಡುತ್ತಿದ್ದು, ವಿದ್ಯಾರ್ಥಿಗಳು ಪರೀಕ್ಷೆಯನ್ನು ಆತ್ಮವಿಶ್ವಾಸದಿಂದ ಎದುರಿಸಲು ಸಹಾಯಕವಾಗಿದೆ.
- ಉತ್ತರ ಪ್ರದೇಶದ ಅಕ್ಷಯ್ ಶ್ರೀವಾಸ್ತವ ಎಂಬ ಕೆಮಿಕಲ್ ಎಂಜಿನಿಯರ್, ವಿಧದ ಸೂಕ್ಷ್ಮ ಜೀವಿಗಳನ್ನು ಬಳಸಿ ನವ್ಯಕೋಶ 60 ಎಂಬ ಜೈವಿಕ ಗೊಬ್ಬರ ತಯಾರಿಸಿದ್ದು, ಈ ಸೂಕ್ಷ್ಮಜೀವಿಗಳು ಬೆಳೆಗಳಿಗೆ ಅಗತ್ಯವಾದ ಪೊಟ್ಯಾಸಿಯಮ್, ಸಾರಜನಕ, ಸತು ಮತ್ತು ಕಾರ್ಬನ್ ಸೇರಿದಂತೆ ಒಂಬತ್ತು ವಿಧದ ಪೋಷಕಾಂಶಗಳನ್ನು ಹೊಂದಿವೆ.
- ಕೆಂಪು ಬಂಗಾರ ಟೊಮೆಟೊಗೆ ಬಂಗಾರದ ಬೆಲೆ ಬಂದ ಹಿನ್ನೆಲೆಯಲ್ಲಿ ಕೋಲಾರ ಎಪಿಎಂಸಿಯಲ್ಲಿ ಜುಲೈ ತಿಂಗಳಲ್ಲಿಯೇ 200 ರೂ. ಕೋಟಿಗೂ ಹೆಚ್ಚಿನ ವಹಿವಾಟು ನಡೆದಿದ್ದು ಸೆಸ್ ರೂಪದಲ್ಲಿ ಬರೋಬ್ಬರಿ ರೂ. 1.26 ಕೋಟಿ ಆದಾಯ ಹರಿದು ಬಂದಿದೆ.

## ಓದುಗರ ಅನಿಸಿಕೆ...




**ಅಪಾಯಕರ ಎನ್ನುವುದು ತಿಳಿಯಿತು :** ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಜ್ಯೂಸ್ ಜಾಕಿಂಗ್ ಬಗ್ಗೆ ಲೇಖನ ನಮ್ಮನ್ನು ಎಚ್ಚರಿಸಿದೆ. ನಾವುಗಳು ನಮ್ಮ ಬಳಿ ಇರುವ ಸ್ಮಾರ್ಟ್‌ಫೋನ್, ಲ್ಯಾಪ್‌ಟಾಪ್ ಅಥವಾ ಟ್ಯಾಬ್ಲೆಟ್‌ನಲ್ಲಿ ಬ್ಯಾಟರಿ ಸಾಮರ್ಥ್ಯ ಕಡಿಮೆಯಾದರೆ ತಕ್ಷಣವೇ ಅದನ್ನು ಮರುಭರ್ತಿ ಮಾಡಲು ಕೂಡಲೇ ಸಿಕ್ಕ ಸಾರ್ವಜನಿಕ ಸ್ಥಳದಲ್ಲಿನ ಚಾರ್ಜಿಂಗ್ ವ್ಯವಸ್ಥೆ ಬಳಕೆ ಮಾಡುತ್ತಿದ್ದೆವು ಈಗ ಅದು ಎಂತಹ ಅಪಾಯಕರ ಎನ್ನುವುದು ತಿಳಿಯಿತು.

**ಎಲ್. ಕೃಷ್ಣಕುಮಾರ್ ಭಟ್, ಮಂಗಳೂರು**

**ಬ್ಯಾಂಕ್ ಗ್ರಾಹಕರನ್ನು ರಕ್ಷಿಸಬೇಕಿದೆ :** ಸೈಬರ್ ಕ್ರೈಂ ವಂಚಕರು ಬ್ಯಾಂಕ್ ಗ್ರಾಹಕರಿಗೆ ನಾನಾ ರೀತಿಯಲ್ಲಿ ಕರೆ ಮಾಡಿ ವಂಚನೆ ಮಾಡುತ್ತಿದ್ದಾರೆ. ಆದರೂ ಜನ ಎಚ್ಚೆತ್ತುಕೊಳ್ಳದೆ, ಅರಿವಿಲ್ಲದೆ ಅವರ ವಂಚನೆಗೆ ಬಿದ್ದು ಹಣ ಕಳೆದುಕೊಳ್ಳುತ್ತಿದ್ದಾರೆ. ಇದಕ್ಕೆ ಯಾವುದೇ ಪರಿಹಾರವೇ ಇಲ್ಲವಾಗಿದೆ. ಆರ್.ಬಿ.ಐ., ಕೇಂದ್ರ ಸರ್ಕಾರ ಈ ಬಗೆಯ ವಂಚಕರ ಬಲೆಯಿಂದ ಬ್ಯಾಂಕ್ ಗ್ರಾಹಕರನ್ನು ರಕ್ಷಿಸಬೇಕಿದೆ.

**ಶೈಲಜಾ ಮಲ್ಲಪ್ಪ, ತುಮಕೂರು**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ
ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

ಇವರಿಗೆ,

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.